8. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ

ವಿಷಯ: ಎತ್ತಿನಹೊಳೆ ಯೋಜನೆ

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಎತ್ತಿನಹೊಳೆ ವಿಚಾರವನ್ನು ತೆಗೆದುಕೊಳ್ಳಿ. ಇದನ್ನು ನಿಯಮ 60ರ ಅಡಿಯಲ್ಲಿ ಕೊಟ್ಟಿದ್ದೇವೆ. ಅವಕಾಶ ಕೊಡದಿದ್ದರೆ ಈ ನಿಯಮದಡಿ ತೆಗೆದು ಕೊಳ್ಳಲೇಬಾರದು.

(ಗೊಂದಲ)

ಉಪಾಧ್ಯಕ್ಷರು : ಇದಾದ ಮೇಲೆ ತೆಗೆದುಕೊಳ್ಳುತ್ತೇನೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ನಾವು ಕೊಟ್ಟಿರುವುದನ್ನು ನಿಯಮ 69 ಕ್ಕೆ ಕನ್ವರ್ಟ್‌ಮಾಡಿ ನಂತರ ಯಾವಾಗಲೋ ಅವಕಾಶ ಕೊಡುವುದಾದರೆ ನಿಯಮ 60 ಏಕೆ ಬೇಕು? ನಿಯಮ 60ಅನ್ನು ನಿಯಮಾವಳಿಗಳಿಂದ ತೆಗೆದು ಹಾಕಿಬಿಡಿ. ನಿಯಮ 60ರ sanctityಯನ್ನು, ಅದರ ಮಹತ್ವವನ್ನು ಕಳೆಯುತ್ತಿದ್ದೀರಿ. ನಿಯಮ 69ಕ್ಕೆ ಇದನ್ನು ಕನ್ವರ್ಟ್ ಮಾಡಿ ಎಲ್ಲೋ ತೆಗೆದುಕೊಂಡು ಹೋಗಿ ನಂತರ ಯಾವುದೋ ಮೂಲೆಯಲ್ಲಿ ಯಾವಾಗಲೋ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ ಎಂದರೆ ಇದಕ್ಕೆ ಅರ್ಥ ಇದೆಯೇ?

(ಗೊಂದಲ)

ಉಪಾಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಇದಾದ ನಂತರ ನಿಮಗೆ ಮಧ್ಯಾಹ್ನ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದಾದ ಮೇಲೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ತೆಗೆದುಕೊಳ್ಳಿ, ಇದು ಬಹಳ ಮಹತ್ವವಾದ ವಿಚಾರ.

(ಗೊಂದಲ)

ಉಪಾಧ್ಯಕ್ಷರು: ಇದು ಆಗಲಿ, ಆದಮೇಲೆ ಮಧ್ಯಾಹ್ನ ನಿಮಗೆಲ್ಲರಿಗೂ ಅವಕಾಶ ಕೊಡುತ್ತೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಶೆಟ್ಟರ್‌ರವರೇ ನೀವು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಎತ್ತಿನಹೊಳೆ ಯೋಜನೆಯ ಮಹತ್ವವೇನು ಎನ್ನುವುದು ನಿಮಗೂ ಗೊತ್ತು. ಈ ಯೋಜನೆ ನಿಮಗೂ ಬೇಕು. ನೀವೇ ಹೀಗೆ ಹೇಳಿದರೆ ಹೇಗೆ? ಇದು ಸರಿಯಲ್ಲ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ಮಧ್ಯಾಹ್ನ ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ವಿರೋಧ ಪಕ್ಷದ ನಾಯಕರಿಗೆ ಚರ್ಚೆಗೆ ಅವಕಾಶ ಕೊಟ್ಟಮೇಲೆ ಎತ್ತಿನಹೊಳೆ ವಿಚಾರ ಬರುತ್ತದೆಯೇ? ಅವರಿಗೆ ನಾವು ಕಡಿಮೆ ಮಾತನಾಡಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಅವರಿಗೆ ರಿಸ್ಟ್ರಿಕ್ಟ್ ಮಾಡಲು ಆಗುತ್ತದೆಯೇ? ನೀವು ಅವಕಾಶ ಕೊಡದಿದ್ದರೆ ನಾವು ಧರಣಿ ಕುಳಿತುಕೊಳ್ಳುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಹಾಗೆ ಮಾಡಬೇಡಿ. ನಂತರ ನಿಮಗೆ ನಾನು ಅವಕಾಶ ಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡ, ಎನ್.ಹೆಚ್.ಕೋನರೆಡ್ಡಿ, ಎಂ.ರಾಜಣ್ಣ, ಕೆ.ಎಸ್.ಮಂಜುನಾಥಗೌಡ, ಪಿ.ಆರ್. ಸುಧಾಕರಲಾಲ್, ಪಿಳ್ಳಮುನಿಶಾಮಪ್ಪ ಮತ್ತು ಎಂ ಕೃಷ್ಣಾರೆಡ್ಡಿಯವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಎತ್ತಿನಹೊಳೆ ಯೋಜನೆಯ ಬಗ್ಗೆ ಚರ್ಚೆ ಮಾಡುವುದು ಅವಶ್ಯಕವಾಗಿದೆ. ಅದನ್ನೇನು ನಾವು ಬೇಡವೆನ್ನುವುದಿಲ್ಲ, ಅದೂ ಚರ್ಚೆಯಾಗಲಿ. (ಈ ಹಂತದಲ್ಲಿ ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಮಧ್ಯಾಹ್ನ ನಿಮಗೆ ಅವಕಾಶ ಕೊಡುತ್ತೇವೆ, ನೀವೂ ಮಾತನಾಡುವಿರಂತೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ನಾವು ಆದ್ಯತೆ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಒತ್ತುವರಿ ತೆರವುಗೊಳಿಸುತ್ತಿರುವುದಕ್ಕೆ ಸಂಬಂಧಪಟ್ಟಂತೆ ನಾವೂ ಸಹ ನಿಲುವಳಿ ಸೂಚನೆ ಮಂಡಿಸಿದ್ದೆವು, ಅದನ್ನೂ ಸಹ ನೀವು ನಿಯಮ, 69ಕ್ಕೆ ಕನ್ವರ್ಟ್ ಮಾಡಿಕೊಟ್ಟಿದ್ದೀರಿ. ನಮಗೂ ಅವಕಾಶ ಕೊಡಿ,

(ಗೊಂದಲ)

ಉಪಾಧ್ಯಕ್ಷರು : ರಾಜ್ಯಪಾಲರ ಭಾಷಣವನ್ನು ಮಂಡಿಸಿದ ಮೇಲೆ ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾಗುತ್ತದೆ. ಅವರು ಮಾತನಾಡಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಆಗ ನೀವು ಎತ್ತಿನಹೊಳೆ ಯೋಜನೆ ಬಗ್ಗೆ ಮಾತನಾಡಿ, ನಿಮಗೂ ಅವಕಾಶ ಕೊಡುತ್ತೇನೆ, ಇಲ್ಲ ಎಂದು ನಾವು ಹೇಳಲಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದು ಮಹತ್ವವಾಗಿರತಕ್ಕಂಥ ವಿಚಾರ. ಈ ವಿಚಾರ ವಿಧಾನಸಭೆಯಲ್ಲಿ ಚರ್ಚೆಯಾಗಬೇಕು. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದು ನಮ್ಮ ಕಡೆ ಮುಗಿಯಿತು. ಈಗ ಆ ಕಡೆ ಅವಕಾಶ ಕೊಡುತ್ತಿದ್ದೀರಿ. ಅದರ ಮೇಲೆ ಮಾತನಾಡುವಾಗ ನೀವು ಅಲ್ಲೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು, ಇಲ್ಲವೆಂದರೆ ತಾವು ಕಾಲವನ್ನು ನಿರ್ಧರಿಸಿ ನಾಳೆ ತೆಗೆದುಕೊಂಡರೆ ಒಳ್ಳೆಯದು. ನಿಮಗೆ

ನಿರ್ದಿಷ್ಟವಾಗಿ ಉತ್ತರ ಬೇಕು ಎನ್ನುವುದಾದರೆ ಆದರ ಬಗ್ಗೆ ಚರ್ಚೆ ಮಾಡಲು ಸರ್ಕಾರವೂ ತೆರೆದ ಮನಸ್ಸಿನಿಂದ ಇದೆ.

(ಗೊಂದಲ)

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಎತ್ತಿನಹೊಳೆ ಯೋಜನೆ ಬಗ್ಗೆ ಚರ್ಚೆ ಮಾಡಲು ನಾನು ನಿಮಗೆ ಅವಕಾಶ ಮಾಡಿಕೊಡುತ್ತೇವೆ. ಈಗ ಅವರು ಮಾತನಾಡಲಿ ಅವರು ಮಾತನಾಡಿದ ಮೇಲೆ ನೀವು ಮಾತನಾಡಿ, Convention ಇದೆ, ಆ ಪ್ರಕಾರ ಅವರು ಮಾತನಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಎತ್ತಿನಹೊಳೆ ವಿಚಾರದ ಬಗ್ಗೆ ನಮ್ಮದೂ ಸಂಪೂರ್ಣ ಬೆಂಬಲವಿದೆ. ಅದು ಚರ್ಚೆಯಾಗಲೇಬೇಕು. ಆದರೆ ಉಪಾಧ್ಯಕ್ಷರು ಅಜೆಂಡಾ ಪ್ರಕಾರ ಹೋಗುತ್ತಿದ್ದಾರೆ. ಹಾಗೆ ನೋಡಿದರೆ ಪ್ರಶ್ನೋತ್ತರವಾದ ಮೇಲೆ ನಾನು ಚರ್ಚೆ ಪ್ರಾರಂಭ ಮಾಡಬೇಕೆಂದು ಇದ್ದೆ. ಈಗಾಗಲೇ ವಿಳಂಬವಾಗಿದೆ. ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎತ್ತಿನಹೊಳೆಯ ಬಗ್ಗೆಯೂ ಪ್ರಸ್ತಾಪ ಮಾಡುತ್ತೇನೆ. ಆಮೇಲೆ ನೀವು ಮಾತನಾಡಿ, ಅದಕ್ಕೂ ಆದ್ಯತೆ ಕೊಡಲೇಬೇಕು, ನಾವು ಬೇಡವೆನ್ನುವುದಿಲ್ಲ. ಅವರು ಅಜೆಂಡಾ ಪ್ರಕಾರ ಹೋಗುತ್ತಿದ್ದಾರೆ.

ಉಪಾಧ್ಯಕ್ಷರು : ಶಿವಲಿಂಗೇಗೌಡರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ತಕ್ಷಣ ನೀವು ಎತ್ತಿನಹೊಳೆ ಬಗ್ಗೆ ಪ್ರಾರಂಭ ಮಾಡಿ. ಅದು ಕನ್ವೆನಷನ್, ಹಾಗೆ ಮಾಡಲು ಬರುವುದಿಲ್ಲ. ರಾಜ್ಯಪಾಲರ ಭಾಷಣವನ್ನು ಮಂಡಿಸಿದ ಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕು. ಅವರು ಮಾತನಾಡಿದ ಮೇಲೆ ನೀವು ಮಾತನಾಡುವಿರಂತೆ. ಈಗ ದಯವಿಟ್ಟು ಎಲ್ಲರೂ ನಿಮ್ಮನಿಮ್ಮ ಆಸನಗಳಿಗೆ ಹೋಗಿ,

(ಗೊಂದಲ)

ಉಪಾಧ್ಯಕ್ಷರು : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನೀವು ಎತ್ತಿನಹೊಳೆ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಅಧ್ಯಕ್ಷರು ಸ್ಪಷ್ಟವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ನಿಮ್ಮ ಭಾವನೆ ಏನಿದೆಯೋ ಅದೇ ನಮ್ಮ ಭಾವನೆಯೂ ಆಗಿದೆ ಎಂದು ವಿರೋಧ ಪಕ್ಷದ ನಾಯಕರೂ ಸಹ ಹೇಳಿದ್ದಾರೆ. ಅಲ್ಲದೆ, ವಿರೋಧ ಪಕ್ಷದ ನಾಯಕರೂ ಸಹ ತಾವು ಮಾತನಾಡುವಾಗ ಅದನ್ನು ಪ್ರಸ್ತಾಪಿಸುತ್ತೇನೆ ಎಂದು ಹೇಳಿದ್ದಾರೆ. ಇದಾದ ನಂತರ ಚರ್ಚೆಗೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಅಧ್ಯಕ್ಷರೂ ಸಹ ಸ್ಪಷ್ಟವಾಗಿ ನಿರ್ದೇಶನ ಕೊಟ್ಟಿದ್ದಾರೆ. ಅವರು ಅಜೆಂಡಾ ಪ್ರಕಾರ ಹೋಗುತ್ತಿದ್ದಾರೆ ವಿರೋಧ ಪಕ್ಷದ ನಾಯಕರು ಮಾಡತನಾಡಬೇಕಾದುದು ಅಗತ್ಯವಾಗಿರುತ್ತದೆ. ಅದಾದ ತಕ್ಷಣ ಎಂದರೆ ಅದರ ಪ್ರಾಮುಖ್ಯತೆಯೇನೂ ಕಡಿಮೆಯಾಗುವುದಿಲ್ಲ.

ಉಪಾಧ್ಯಕ್ಷರು: ಈ ಸಮಸ್ಯೆಯ ಬಗ್ಗೆ ನಮಗೂ ಅರಿವಿದೆ. ನಮಗೂ ನಿಮ್ಮಷ್ಟೇ ಕಾಳಜಿ ಇದೆ. ತಮ್ಮ ಕಾಳಜಿ ನಮಗೆ ಅರ್ಥವಾಗುತ್ತದೆ. ಕನ್ವೆನಷನ್ ಪ್ರಕಾರ ಅವರು ಮಾತನಾಡಬೇಕು. ಅವರು ಮಾತನಾಡಲಿ. ಅವರು ಮಾತನಾಡಿದ ನಂತರ ನೀವು ಪ್ರಾರಂಭ ಮಾಡಿ, ನಾನು ಅವಕಾಶ ಕೊಡುತ್ತೇನೆ. ನಾವು ಪ್ರೊಸೀಜರ್ ಪ್ರಕಾರ ಹೋಗಬೇಕಾಗುತ್ತದೆ. ದಯಮಾಡಿ ತಮ್ಮತಮ್ಮ ಸೀಟುಗಳಿಗೆ ಹೋಗಿ,

(ಈ ಹಂತದಲ್ಲಿ ಧರಣಿ ನಿರತ ಸದಸ್ಯರು ತಮ್ಮತಮ್ಮ ಆಸನಗಳಿಗೆ ಹಿಂತಿರುಗಿದರು)

ಉಪಾಧ್ಯಕ್ಷರು : ಜಗದೀಶ ಶೆಟ್ಟರ್‌ರವರೇ, ನೀವು ಪ್ರಾರಂಭ ಮಾಡಿ.

9. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಹಲವಾರು ವಿಚಾರಗಳನ್ನು ಮಂಡನೆ ಮಾಡಲು ತಾವು ಅನುಮತಿ ಕೊಟ್ಟಿದ್ದೀರಿ. ಈ ಸದನದ ಸದಸ್ಯರಾದ ಶಿವಲಿಂಗೇಗೌಡರು ಮತ್ತು ಇನ್ನಿತರರು ಎತ್ತಿನಹೊಳೆ ವಿಚಾರವಾಗಿ ಮತ್ತು ಇನ್ನಿತರರು ಎತ್ತಿನಹೊಳೆ ವಿಚಾರವಾಗಿ ಚರ್ಚೆ ಮಾಡಬೇಕು, ಅವರು ತಮ್ಮ ಭಾಗದ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ನೀರಾವರಿ ಬಗ್ಗೆ ಮಾತನಾಡಬೇಕು ಎಂದು ಈಗಾಗಲೇ ತಮಗೆ ಸೂಚನೆಯನ್ನು ಕೊಟ್ಟಿದ್ದು ಅದನ್ನು ತಾವು ನಿಯಮ 69ರ ಪ್ರಕಾರ ನೀಡಿ ಇವತ್ತಿನ ಅಜೆಂಡಾದಲ್ಲಿ ತಾವು ಅದಕ್ಕೆ ಸಮಯವನ್ನೂ ನಿಗದಿ ಮಾಡಿದ್ದೀರಿ. ಅದನ್ನು ಆದ್ಯತೆ ಮೇಲೆ ಚರ್ಚೆ ಮಾಡಬೇಕು. ಅದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಅದಕ್ಕೆ ನಮ್ಮದೂ ಸಂಪೂರ್ಣವಾದ ಬೆಂಬಲವಿದೆ. ಅವರು ಆ ವಿಚಾರಗಳನ್ನು ಹೇಳುವಂತವರಾಗಲು ಅದಕ್ಕೆ ನಮ್ಮದೂ ಬೆಂಬಲವಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಈ ಸರ್ಕಾರದವರು ರಾಜ್ಯಪಾಲರ ಮುಖಾಂತರ ಕೆಲವೊಂದು ವಿಚಾರಗಳನ್ನು ಸದನಕ್ಕೆ ಮಂಡನೆ ಮಾಡಿದ್ದಾರೆ. ರಾಜ್ಯಪಾಲರ ಭಾಷಣ ಎಂದರೆ ಸರ್ಕಾರದ ಆ ವರ್ಷದ ನಿರ್ದಿಷ್ಟವಾದಂಥ ಗುರಿ ಏನು, ಆ ವರ್ಷದಲ್ಲಿ ನಮ್ಮ ನಿಲುವೇನು, ನಾವು ಯಾವ ರೀತಿ ಯೋಜನೆಗಳನ್ನು ತೆಗೆದುಕೊಳ್ಳುತ್ತೆವೆ, ಯಾವ ರೀತಿ ಸರ್ಕಾರದ ನೀತಿ ಇರುತ್ತದೆ ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳುವಂಥದ್ದು ರಾಜ್ಯಪಾಲರ ಭಾಷಣದ ಮುಖ್ಯ ಉದ್ದೇಶ.